ತತ್‌ಕ್ಷಣ ಕೇಸ್ ರಿಜಿಸ್ಟರ್ ಆಗಿದಾಗ್ಯೂ ಕೂಡ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ.

"ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರೈಮ್ ನಂ. 19891 ಎಂದು ಮೊಕದ್ದಮೆ ದಾಖಲಾಗಿತ್ತು. ಇಷ್ಟಾದರೂ ಕೂಡ ಮುಂದೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ರಾಜ್ಯ ಸರ್ಕಾರದ ಈ ಕ್ರಮದಿಂದ ಸಿ.ಬಿ.ಐ.ಗೆ. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ರಾಜೀವ್‌ಗಾಂಧಿಯವರ ಹತ್ಯೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ತನಿಖೆ ನಡೆಯಲು ಸಿ.ಬಿ.ಐ. ನವರಿಗೆ ತೀವ್ರವಾದ ಬಿಕ್ಕಟ್ಟು ಉಂಟಾಗಿದೆಯೆಂದು ಗೊತ್ತಾಗಿದೆ." ಹೀಗೆಂದು. ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಬಯಸುತ್ತೇನೆ. ಅದನ್ನು ಸರ್ಕಾರ ಈ ಸಭೆಗೆ ತಿಳಿಸಬೇಕಾಗಿದೆ. ಇದು ವಾಸ್ತವಿಕವಾದ ಅಂಶವೇ ಹೇಗೆ? ಎಂದು ವೇಳೆ ವಾಸ್ತವಾದ ಅಂಶವೇ ಆಗಿದ್ದರೆ ಈವತ್ತು ದಿನನಿತ್ಯ ನಡೆಯಬೇಕಾಗಿರತಕ್ಕ ಒಂದು ವಿಚಾರಣೆಗೆ ಸಹಾಯಕವಾಗತಕ್ಕ ರೂಪದಲ್ಲಿ ಸರ್ಕಾರ ಏನು ಮಾಡಿದೆ. ಅದನ್ನು ಸರ್ಕಾರ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಸಂದರ್ಭದಲ್ಲಿ...

ಅಧ್ಯಕ್ಷರು : ನೀವು ಬರೆದು ಕಳಿಸಿದ್ದೀರಾ? ಅವರು ಬರೆದು ಕಳಿಸಿದ್ದರು.ಆದುದರಿಂದ..

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ಓರಿಯ ಸದಸ್ಯರಾದ ಶ್ರೀಮಾನ್ ಕೆ.ಪಿಚ್. ರಂಗನಾಥ್ ರವರು ಏನು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೋ ಅದಕ್ಕೆ ಸಂಜೆಯೊಳಗಾಗಿ ವಿವರಣೆಯನ್ನು ಕೊಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಜೇಜ್ ಸೇಠ್ (ಸಾರಿಗೆ, ವಕ್ಫ್ ಹಾಗೂ ಹಜ್ ಸಮಿತಿಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ 1950ನೇ ಇಸವಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕಾಯ್ದೆಯ 33(4) ನೇ ಕಲಮಿನ ಮೇರೆಗೆ 1987-88ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕೆ.ಪಿಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, 1983ನೇ ಇಸವಿಯ ಜಿಲ್ಲಾ ಪರಿಷತ್ತುಗಳು, ಮಂಡಲ ಪಂಚಾಯಿತಿಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಕಾಯ್ದೆಯ 309(3)ನೇ ಕಲಮಿನ ಮೇರೆಗೆ; ಸರ್ಕಾರವರು ಕೈಗೊಂಡ ಕ್ರಮದ ಜ್ಞಾಪಕ ವಿವರಣಾ ಪತ್ರದೊಂದಿಗೆ 1988-89 ಹಾಗೂ 1989-90 ನೇ ಸಾಲುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಜಿಲ್ಲಾಪರಿಷತ್ತುಗಳ ವಾರ್ಷಿಕ ಆಡಳಿತ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

1) ಮೈಸೂರು 2) ಮಂಡ್ಯ 3) ಹಾಸನ 4) ಚಿಕ್ಕಮಗಳೂರು 5) ದಕ್ಷಿಣ ಕನ್ನಡ 6) ಮಡಿಕೇರಿ

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಸಚಿವರು) : ಶ್ರೀ ಧರ್ಮಸಿಂಗ್(ಗೃಹ ಹಾಗೂ ಅಬಕಾರಿ ಸಚಿವರವರ) ಪರವಾಗಿ: ಸನ್ಮಾನ್ಯ ಅಧ್ಯಕ್ಷರೆ 1956ನೇ ಇಸವಿಯ ಕಂಪನಿಗಳ ಕಾಯ್ದೆಯ 619 (ಎ) ಕಲಮಿನ ಮೇರೆಗೆ 1989-90 ನೇ ಸಾಲಿನ

ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಯಮದ ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಶ್ರೀ ಕೆ. ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿಮಂತ್ರಿಗಳು) ರವರ ಪರವಾಗಿ ಸನ್ಮಾನ್ಯ ಅಧ್ಯಕ್ಷರೆ,

1) 1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಕಾಯ್ದೆಯ 17 (3) ನೇ ಕಲಮಿನ ಮೇರೆಗೆ 1990-91ನೇ ಸಾಲಿನ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ವಾರ್ಷಿಕ ಪಣಕಾಸಿನ ವಿವರ (ಆಯವ್ಯಯ)

2) 1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಕಾಯ್ದೆಯ 86(2)ನೇ ಕಲಮಿನ ಮೇರೆಗೆ 1987-88ನೇ ಸಾಲಿನ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ ಹಾಗೂ

4) 1988 ರಿಂದ 1990ನೇ ಸಾಲುಗಳ ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ದಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೂ ಮುಂಚೆ ಒಂದು ವಿಷಯವಿದೆ. ನಾವು ಶ್ರೀನಿವಾಸಪುರದ ಗಲಾಟೆಯ ಬಗ್ಗೆ ಬಹಳ ವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದೆವು. ಮಾನ್ಯ ಗೃಹ ಸಚಿವರು ಅದಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದರು. ಅವರ ಮಾತನ್ನು ನಂಬಿ ಈವತ್ತು ಹೆಣ್ಣು ಮಕ್ಕಳು ಮಾಡಬೇಕಾಗಿದ್ದ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ನಾವು ಅವರಿಗೆ ಸೂಕ್ತ ವ್ಯವಸ್ಥೆಯ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದೀವೆ. ಆದುದರಿಂದ ಈ ವಿಚಾರದಲ್ಲಿ ಮುಂದುವರೆದಂತಹ ಸ್ಥಿತಿ ಏನಿದೆ ಎನ್ನತಕ್ಕದ್ದು ಸದನದ ಗಮನಕ್ಕೆ ತರಬೇಕು. ತಾವು ಗೃಹ ಮಂತ್ರಿಗಳಿಗೆ ಆದೇಶವನ್ನು ಕೊಡಬೇಕು.

ಅಧ್ಯಕ್ಷರು : ಆಯಿತು, ಪೇಳಿ ಕಳಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಗೃಹ ಮಂತ್ರಿಗಳ ಪೇಳಿಕೆ ತಯಾರಾಗಿದೆ. ಆದರೆ ಅವರು ಮೇಲ್ಮನೆಯಲ್ಲಿ ಇರುವುದರಿಂದ, ಅವರು ಅಲ್ಲಿಂದ ಬಂದಮೇಲೆ ಪೇಳಿಕೆಯನ್ನು ಕೊಡುತ್ತಾರೆ.

ಶಾಸನ ರಚನಾ ಕಾರ್ಯ ಕಲಾಪಗಳು

1991ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)ರವರ ಪರವಾಗಿ, ಸನ್ಮಾನ್ಯ ಅಧ್ಯಕ್ಷರೆ, 1991ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.